ಪ್ರಬಂಧ

# ಗ್ಯಾರಂಟಿ ಕೊಸರು ಕವಿಗೋಷ್ಠಿಯಲ್ಲಿ ಹೆಸರು!



**ಪ್ರಭಾಮಣಿ ನಾಗರಾಜ**

ಕಲೆ: ಗುಜ್ಜಾರ್

ಮೊದಲೆಲ್ಲಾ ನಮ್ಮೂರಿನಲ್ಲಿ ಸಾಹಿತ್ಯಿಕ ಸಮಾರಂಭಗಳಾದರೆ ನಮ್ಮ ಮನೆಗೊಂದು ಆಹ್ವಾನ ಪತ್ರಿಕೆ ಗ್ಯಾರಂಟಿಯಾಗಿ ಬರುತ್ತಿತ್ತು. ಅದಕ್ಕೆ ಮೊದಲೇ ಸಂಬಂಧಿತ ಜವಾಬ್ದಾರರಿಂದ ಲ್ಯಾಂಡ್ ಲೈನಿನಲ್ಲಿ ಕರೆ ಬಂದು, ನನ್ನ ಆಮೆನಡಿಗೆ ಅತ್ತ ಪಯಣಿಸುವ ಮೊದಲೇ ಜಿಂಕೆಯಂತೆ ಓಡುವ ಮಕ್ಕಳೋ, ಅಥವಾ ಕಾಡಿನ ರಾಜನಂತೆ ಘರ್ಜಿಸುತ್ತಾ ಹಾರುಗಾಲು ಹಾಕುತ್ತಿದ್ದ ನನ್ನವರೋ ಫೋನನ್ನು ರಿಸೀವ್ ಮಾಡಿದ ನಂತರ 'ಅಮ್ಮಂಗೇ...' ಎನ್ನುವ ಸಂಭ್ರಮದ ಕರೆಯೋ, ಅತ್ತ ಕಡೆಯವರೊಡನೆ ಅತ್ಯುತ್ಸಾಹದಿಂದ ಮಾತನಾಡಿ, ನನ್ನತ್ತ ತಿರುಗಿ 'ನೋಡು ನಿಂಗೆ' ಎನ್ನುವಂಥಾ ಆರೋಪಿತ ತಾತ್ಸಾರಯುಕ್ತ ನೋಟವೋ ನನ್ನನ್ನು ತಾಕಿದಾಗ ನಾನು ಗಜಗಮನೆಯಾಗಿ ಫೋನಿನ ಬಳಿ ಸಾರಿ, ಸಂಭಾಷಿಸಿ ಅಹ್ವಾನವನ್ನು ಸ್ವೀಕರಿಸಿ...–ಇದೆಲ್ಲಾ ಗತಕಾಲದ ವೈಭವವೆಂದರೆ ತಪ್ಪಲ್ಲವೇನೋ. ನಾನಷ್ಟೇ ಆ ದಿನಗಳನ್ನು ಹೀಗೆ ನೆನೆಯುತ್ತಿದ್ದೇನೋ ಅಥವಾ ನನ್ನಂಥಾ ಮತ್ತಾವುದಾದರೂ ಗತಕ್ಕಂಟಿದ ಅಜ್ಞಾತ ಜೀವಿಯೂ ನನಗೆ ಸಾಥ್ ನೀಡುತ್ತಿದೆಯೋ ನಾ ಕಾಣೆ. ಇಷ್ಟೆಲ್ಲಾ ಸಡಗರ ನಡೆಯುತ್ತಿದ್ದುದು ನಿಜವಾದರೂ ಆ ಆಹ್ವಾನ ಪತ್ರಿಕೆಯಲ್ಲಿ ನನ್ನ ಸ್ಥಾನವೆಲ್ಲಿದೆ ಎನ್ನುವುದನ್ನು ನಾನು ತೆರೆದು ನೋಡುವ ಅಗತ್ಯವೇ ಇರಲಿಲ್ಲ. ಅದೆಷ್ಟು ಚಿರಪರಿಚಿತವಾಗಿತ್ತೆಂದರೆ, 'ನಿಂಗೆ ಕವಿಗೋಷ್ಠಿಗೆ ಇನ್ವಿಟೇಷನ್ ಬಂದಿದೆ ನೋಡು' ಎಂದು ಅದನ್ನು ತೆರೆಯುವ ಮೊದಲೇ ಮನೆಯವರು ಹೇಳಿಬಿಡುತ್ತಿದ್ದರು.

ಆಗ ಆ ಸಾರ್ವಜನಿಕ ಸಾಹಿತ್ಯ ಬದುಕಿನ ಪ್ರಾರಂಭದ ದಿನಗಳಲ್ಲಿ ಕವಿಗೋಷ್ಠಿಗೆ ಹೋಗುವುದೆಂದರೆ ಏನೋ ವಿಶೇಷ ಸಂಭ್ರಮ. ರಜೆಯ ದಿನವಾದರಂತೂ ಯಾವ ಕವನ ಓದುವುದು ಎನ್ನುವ ಆಯ್ಕೆಗಿಂತ ಮೊದಲೇ ಯಾವ ಸೀರೆಯುಡುವುದು ಎನ್ನುವುದನ್ನು ನಿರ್ಧರಿಸಿ, ಅದಕ್ಕೊಪ್ಪುವ ಸಕಲ ಮ್ಯಾಚಿಂಗ್‌ಗಳನ್ನೂ ಸಿದ್ಧಗೊಳಿಸಿಕೊಂಡು ಸಮಾಧಾನವಾದ ನಂತರ ಅನಿವಾರ್ಯವಾಗಿ ಕವನವನ್ನು ಸೆಲೆಕ್ಟ್ ಮಾಡಿ ಅದನ್ನು ಹೇಗೆ ಧ್ವನಿಯ ಏರಿಳಿತದೊಂದಿಗೆ ಓದುವುದೆನ್ನುವುದನ್ನು ಕನ್ನಡಿಯ ಮುಂದೆ ನಿಂತು ಪ್ರಾಕ್ಟೀಸ್ ಮಾಡಿಕೊಳ್ಳುವಾಗ ನನ್ನವರ ಕುತೂಹಲಭರಿತ ನೋಟವನ್ನೂ ಎದುರಿಸಿ, 'ಇವಳೇನು ಕವನ ಓದಕ್ಕೆ ಹೋಗ್ತಿದಾಳೋ, ಶೂಟಿಂಗ್‌ಗೋ' ಎನ್ನುವಂಥಾ ಇವರ ಹುಬ್ಬೇರಿಸುವಿಕೆಗೆ ಮೌನವಹಿಸಿ... 'ಅಮ್ಮ, ಮತ್ತೆಮತ್ತೆ ಕನ್ನಡಿ ಮುಂದೆ ಏಕೆ ನಿಲ್ತೀಯಾ?' ಎನ್ನುವ ಮಕ್ಕಳ ಪ್ರಶ್ನೆಗೆ ಉತ್ತರಿಸಲಾರದೇ ತಡಬಡಾಯಿಸುತ್ತಿರುವಾಗಲೇ... 'ಕವನ ಓದುವಾಗ ಮೂತಿ ಹೇಗೆ ಕಾಣುತ್ತೆ ನೋಡಿಕೊಳ್ಳಕ್ಕೆ' ಎಂಬ ಅವರ ಪರಸ್ಪರ ಮಾತುಕತೆಯ ಫಲವಾದ ಪರಿಹಾರವೂ ಅವರಿಂದಲೇ ಬಂದು... ಅಬ್ಬಾ ಆ ದಿನಗಳು...

ಹೌದು. ಮೊದಲೆಲ್ಲಾ ನನ್ನನ್ನು ನಾನಿನ್ನೂ ಸಾಹಿತ್ಯ